ಎಂ.ಸಿ. ಧನ್ಯತಾ, ಬೆಂಗಳೂರು
ಚದುರಂಗಕ್ಕೂ, ಚಿತ್ರರಂಗಕ್ಕೂ ಏನು ವ್ಯತ್ಯಾಸ?




ಚದುರಂಗದಲ್ಲಿ ರಾಣಿಗೆ ರಾಜನಿಗಿಂತ ಹೆಚ್ಚಿನ ಸ್ವಾತಂತ್ರ್ಯವಿದೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ವಯಸ್ಸು ಜಾಸ್ತಿಯಾಗುತ್ತಿದ್ದಂತೆ ಆಯಸ್ಸು ಕಡಿಮೆಯಾಗುವುದು ಎಷ್ಟು ಸರಿ?
ವಯಸ್ಸು ಅಂತಿರಲಿ; ಆಯಾಸ ಹೆಚ್ಚುತ್ತಿದ್ದಂತೆ ಆಯಸ್ಸು ಕಡಿಮೆಯಾಗುವುದು ಸಹಜವೇ.

ಬಿ.ಆರ್. ಉಷಾ, ಕೆನಡಾ
ಮದುವೆ ಆದ ಹೆಣ್ಣಿಗೆ ತಾಳಿ, ಕಾಲುಂಗುರ. ಗಂಡಿಗೆ?
ಇನ್ವಿಸಿಬಲ್ ಮೂಗುದಾರ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ರಾಜಕಾರಣಿಗಳಿಗಿಂತ ಶ್ರೀಮಂತರು ಯಾರು?



ಅವರ ಹೆಂಡತಿಯರು.

ಕೆ. ಕೃಷ್ಣಕುಮಾರ್, ಬೆಂಗಳೂರು
ವನಿತೆಯರೇಕೆ ವ್ಯಂಗ್ಯಚಿತ್ರಗಳನ್ನು ರಚಿಸುವುದಿಲ್ಲ?
ಇದ್ದಾರಲ್ಲ; ಪುರುಷನು ಸ್ತ್ರೀಯ ವ್ಯಂಗ್ಯವನ್ನು ಸ್ವೀಕರಿಸುವಷ್ಟು ಪ್ರಬುದ್ಧನಾಗಿಲ್ಲವಷ್ಟೆ.

ಬಿ. ಚಂದ್ರೇಗೌಡ, ಬೆಂಗಳೂರು
ಚಟಕ್ಕೂ, ಚಟ್ಟಕ್ಕೂ ಏನು ಸಂಬಂಧ?
ಇದು ಮಾರ್ಗ, ಅದು ನಿಲ್ದಾಣ.

ರವೀಂದ್ರ ಕಾಸರ, ಶಿವಮೊಗ್ಗ
ಅಪರಾಧಿಗಳ ಪರವಾಗಿ ಇರುವ ಅಭಿಮಾನಿಗಳೂ ಅಪರಾಧಿಗಳೇ ಅಲ್ಲವೆ?
ಆದರೆ ಅದು ನಮ್ಮ ಪರಂಪರೆ. ಕೌರವನಿಗೆ 11ಅಕ್ಷೋಹಿಣಿ ಬೆಂಬಲಿಗರು!

ಕೆ.ಪಿ. ಮಂಜುನಾಥ್, ಕೆ.ಟಿ.ಹಳ್ಳಿ
ಸುಡುಬಿಸಿಲ ನಾಡಾದ ಬಳ್ಳಾರಿಯ ಬೀಚಿ ಎಲ್ಲರನ್ನು ನಗಿಸುತ್ತಿದ್ದರು. ಹೇಗೆ ರಾಮ್?
ಧಗೆಯನ್ನು ನಗೆಯಿಂದ ಗೆಲ್ಲಬಹುದೆಂದು ಅನುಭವದಿಂದ ಅರಿತಿದ್ದರಲ್ಲ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ನಾನು ಮಾತಾಡಿದರೆ ಆರ್ಡರ್ ಮಾಡಿದಂತೆ ಇರುತ್ತಂತೆ. ಮೌನವಾಗಿ ಇದ್ದುಬಿಡಲಾ ಸರ್?
ಹೋಟೆಲ್‌ಗೆ ಹೋದಾಗ ಮಾತನಾಡಿ!

ರಾಜಶೇಖರ ಹಾದಿಮನಿ, ಧಾರವಾಡ
ಸ್ವಲ್ಪ ಸರಿರಿ – ಇದೆಲ್ಲಿಯ ಮಾತು ರಾಮ್‌ಜೀ?
ಆರಾಧನೆಯ ಸಮಯದಲ್ಲಿ ಊಟದ ಸಾಲಿನಲ್ಲಿನ ಮಾತು.

ರತ್ನಜ, ಮೈಸೂರು
ಸುಸ್ತಾಗುವ ಮೊದಲೇ ವಿಶ್ರಾಂತಿ ಪಡೆಯುವುದನ್ನು ಏನೆನ್ನಬೇಕು?
ವಾಲಂಟರಿ ರಿಟೈರ್‌ಮೆಂಟ್.

ಲಕ್ಷ್ಮಣ್ ಗೂರ್ಲಕಟ್ಟೆ, ಮೈಸೂರು
ರೋಗಿಷ್ಟ ವೃದ್ಧ ಧುರೀಣರು ಸತ್ತಾಗ 'ತುಂಬಲಾರದ ನಷ್ಟ' ಎನ್ನುವವರ ಬಗ್ಗೆ ಏನಂತೀರಿ?
ಅದು ಬಿಲ್ ವಿದ್ಯಾ ಪ್ರವೀಣ ನರ್ಸಿಂಗ್ ಹೋಮಿನ ವೈದ್ಯರ ಮಾತು ಎನ್ನುತ್ತೇನೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ದುಃಖವನ್ನು ಮಾರಲಾಗದು; ಸುಖವನ್ನು ಖರೀದಿಸಲಾಗದು. ಏಕೆ?
ಇದನ್ನು ಕೊಳ್ಳುವವರು, ಅದನ್ನು ಮಾರುವವರು ಇಲ್ಲವಾದ್ದರಿಂದ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನಿಗೆ ಹಣದ ಬೆಲೆ ತಿಳಿಯುವುದು ಯಾವಾಗ?
ಕರೆನ್ಸಿ ಎಕ್ಸ್‌ಚೇಂಜ್‌ಗೆ ಹೋದಾಗ.

## ಬಹುಮಾನಿತ ಪ್ರಶ್ನೆ

ಜಗದೀಶ ಬಿ. ಹೊಸೂರು, ಮೈಸೂರು
ಹಣ ಉಳಿಸಿ ಉಳಿಸಿ ಕಡೆಗಾಲದಲ್ಲಿ ಆಸ್ಪತ್ರೆಗೆ ಖರ್ಚು ಮಾಡುವವರಿಗೆ ನಿಮ್ಮ ಕಿವಿಮಾತು?
ಹೇಳಬಹುದು. ಆದರೆ ಕಡೆಗಾಲದಲ್ಲಿ ಇರುವವರಿಗೆ ಕಿವಿ ಕೇಳಿಸುತ್ತದೆಯೆ?

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಆರೋಗ್ಯಕ್ಕೂ, ಹಣಕ್ಕೂ ಎಷ್ಟು ದೂರ?
ಒಂದೇ, ಅನಾರೋಗ್ಯದಷ್ಟು.

ಉದಯ ಸಿದ್ರಾಯ ಕಾಕತಿ, ಬೆಳಗಾವಿ
ಈ ಪುಟದಲ್ಲಿ ಬಹುಮಾನಿತ ಪ್ರಶ್ನೆಗೆ ಅವಕಾಶವಿರುವಂತೆ ಬಹುಮಾನಿತ ಉತ್ತರಕ್ಕೂ ಅವಕಾಶವಿರಬೇಕಲ್ಲವೆ?
ಆಗದು. ಬಹುಮಾನದ ಬಗ್ಗೆ ಬಹುಮತ ದುರ್ಲಭ.

ದಿನೇಶ್, ಗುಡ್ಡದೂರು
ನರಕದಲ್ಲಿರುವ ಯಮನ ಪ್ರಶ್ನೆಗೆ ಉತ್ತರಿಸುವ ಧೈರ್ಯವಿದೆಯಾ ನಿಮಗೆ?



ಖಂಡಿತ. ಯಾವ ಸ್ಥಳದಿಂದ ಕಾರ್ಡಿನಲ್ಲಿ ಪ್ರಶ್ನೆ ಕಳುಹಿಸಿದರೂ ಉತ್ತರಿಸುವೆ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಕಾಲ ಬದಲಾದಂತೆ ಮನುಷ್ಯ ಬದಲಾಗಿದ್ದಾನೆ. ಪ್ರಾಣಿಪಕ್ಷಿಗಳು?
ಪ್ರವಾಸಿ ತಾಣಗಳಲ್ಲಂತೂ ಕೆಲವು ಪ್ರಾಣಿಗಳು ಸ್ವಾವಲಂಬನೆ ತೊರೆದು ಭಿಕ್ಷೆಗಿಳಿದಿವೆ.

ಆರ್. ಮಧುಸೂದನ್, ಹಾಸನ
ಚೆಲುವೆಯೊಬ್ಬಳು 'ಕವಿ'ಯನ್ನು ಮದುವೆಯಾದರೆ ಲಾಭ ಏನು, ನಷ್ಟ ಏನು?
ಕವಿಗೆ ಸ್ಫೂರ್ತಿಯ ಲಾಭ; ಕವಿ ಕೊರೆತದಿಂದ ಮಡದಿಗೆ ಸ್ನೇಹಿತರ ಸಂಖ್ಯೆಯಲ್ಲಿ ನಷ್ಟ.

■ ರಾಮ್